# ಜನಸೇವೆಯೇ ಜನಾರ್ದನ ಸೇವೆ

ಕೆ. ಬಿ. ಪ್ರಭುಪ್ರಸಾದ್

**ಜ**ನಸೇವೆಯೇ ಜನಾರ್ದನ ಸೇವೆ, ನರನ ಸೇವೆಯೇ (ಹರನ ಸೇವೆ) ನಾರಾಯಣನ ಸೇವೆ ಮುಂತಾದ ಉಕ್ತಿಗಳನ್ನು ಕೇಳಿದ್ದೇವೆ. ಗಂಟೆಗಟ್ಟಲೆ ಕುಳಿತು ಜಪ ಮಾಡುತ್ತ ಬಂಡಿಗಟ್ಟಲೆ ಹೂ ಹಾಕಿ ಆಡಂಬರದ ಪೂಜೆ ಮಾಡುತ್ತ ಸಹಮಾನವರ ಇಲ್ಲವೆ ಜೀವಿಗಳ ಬಗ್ಗೆ ಕಿಂಚಿತ್ತೂ ಪ್ರೀತಿ, ಕರುಣೆ, ಸಹಾನುಭೂತಿಗಳಿಲ್ಲದೆ ಅವರನ್ನು ಅತ್ಯಂತ ಕ್ರೂರವಾಗಿ ನಡೆಸಿಕೊಳ್ಳುವ ಹೃದಯಹೀನರು ಈ ಉಕ್ತಿಯನ್ನು ಅರ್ಥಮಾಡಿಕೊಳ್ಳಬೇಕು. ಭಕ್ತಿ–ಪೂಜೆ, ಜಪ–ತಪ ಬೇಡವೆಂದಲ್ಲ. ಜೀವಾನುಕಂಪೆಯಿರದ ಹೃದಯಹೀನತೆ ಬೇಡ, ಅಷ್ಟೆ.

ವಿಚಾರವಾದಿಗಳು, ಮಾನವತಾವಾದಿಗಳು, ಪ್ರೀತಿ–ಅನುಕಂಪೆಗಳಿಂದ ಕೂಡಿದ ಜನಸೇವೆಯನ್ನು ಮಾತ್ರ ಒಪ್ಪುತ್ತಾರೆ. ದೇವರು ಇದ್ದಾನೆ ಎಂಬುದರಲ್ಲಿ ಅವರಿಗೆ ನಂಬಿಕೆಯಿಲ್ಲ; ಅವರು "ಜನಾರ್ದನನ ಸೇವೆ" ಎಂಬ ವಿಚಾರವನ್ನು ಹೇಗೆ ಒಪ್ಪುವರು?

ಜನಸೇವೆಯೇ ಜನಾರ್ದನನ ಸೇವೆ ಎಂಬ ತತ್ತ್ವದ ಉಗಮ ಇರುವುದು ಧರ್ಮದ ಮೂಲವಾದ ದಯೆ ಮತ್ತು ಪ್ರೀತಿಗಳಿಂದ ಕೂಡಿದ ಹೃದಯವಂತಿಕೆಯಲ್ಲಿ. ಧರ್ಮ ಎಂಬುದು ಕೇವಲ ಅರ್ಥಹೀನ ಬಾಹ್ಯಾಚರಣೆಗಳಲ್ಲ. ಮೂಢನಂಬಿಕೆಗಳೂ ಅಲ್ಲ. ಶುಷ್ಕ, ನಿರ್ದಯ, ಕಟ್ಟುಪಾಡುಗಳೂ ಅಲ್ಲ.

ಶ್ರೀರಾಮಕೃಷ್ಣರು ತಮ್ಮ ಉತ್ಕಟವಾದ ಭಕ್ತಿಯಿಂದ ಮತ್ತು ತೀವ್ರವಾದ ಸಾಧನೆಯಿಂದ ಜಗನ್ಮಾತೆ ಕಾಳಿಯನ್ನು ಸಾಕ್ಷಾತ್ಕರಿಸಿಕೊಂಡರು. ಅದ್ವೈತ ಸಾಧನೆಯಿಂದ ನಿರ್ವಿಕಲ್ಪ ಸಮಾಧಿಸ್ಥಿತಿಯ ಆನಂದವನ್ನೂ ಅನುಭವಿಸಿದರು. ಹಲವು ಬಗೆಯ ಸಾಧನೆ, ಅಧ್ಯಾತ್ಮ ಪ್ರಯೋಗಗಳನ್ನು ನಡೆಸಿ ಎಲ್ಲ ಧರ್ಮಗಳೂ ಒಂದೇ ಗುರಿಗೆ ಕೊಂಡೊಯ್ಯುವ ವಿವಿಧ ಪಥಗಳು ಎಂದು ಸ್ವಾನುಭವದಿಂದ ಕಂಡುಕೊಂಡರು. ಸನಾತನ ಧರ್ಮವು ಅನುಷ್ಠಾನಸಾಧ್ಯವಾದುದು ಎಂದೂ ತೋರಿಸಿದರು. ತಾವು ಕಂಡುಕೊಂಡ ಸತ್ಯವನ್ನು ಸರಳಗೊಳಿಸಿ ಎರಡು ಸೂತ್ರಗಳಲ್ಲಿ ಅವರು ಹೀಗೆ ಕೊಟ್ಟಿದ್ದಾರೆ: ೧. **ಮಾನವನಲ್ಲಿ ಅಂತರ್ಗತವಾಗಿರುವ ದೈವತ್ವದ ಅರಿವು,** ೨. **ಲೋಕಹಿತ ಸಾಧನೆ**. ದೇವರನ್ನು ಭಕ್ತಿಯಿಂದ ಒಲಿಸಿಕೊಳ್ಳುವುದು ಒಂದು ಸಾಧನೆಯಾದರೆ, ಪ್ರತಿ ಮಾನವನಲ್ಲಿಯೂ ದೇವರನ್ನು ಕಾಣುತ್ತ ಸೇವೆಯನ್ನು ಸಲ್ಲಿಸುವುದು ಮತ್ತೊಂದು ಬಗೆಯ ಅಧ್ಯಾತ್ಮ ಸಾಧನೆ. ಪ್ರತಿಯೊಂದು ಧರ್ಮವೂ ಈ ಎರಡೂ ಸಾಧನೆಗಳನ್ನು ಒತ್ತಿ ಹೇಳುತ್ತದೆ.

> **“ಸಮಾಜಸುಧಾರಕರಲ್ಲಿ ನನ್ನದೊಂದು ವಿಜ್ಞಾಪನೆ. ದೇಶದ ಶೋಚನೀಯ ಸ್ಥಿತಿಯನ್ನು ಕಂಡು ನಿಮ್ಮೆದೆ ಬೇಯುತ್ತದೆಯೆ? ಸೋದರನ ದುರವಸ್ಥೆಗೆ ನಿಮ್ಮೆದೆ ನೋಯುತ್ತದೆಯೆ? ಆರ್ಯಋಷಿಪುತ್ರರು ಪಶುಗಳಾಗಿರುವುದನ್ನು ನೋಡಿ ನಿಮ್ಮೆದೆ ಉರಿಯುತ್ತದೆಯೇ? ಹೊಟ್ಟೆಗಿಲ್ಲದೆ ನರಳಿ ಸಾಯುವ ಸಹಸ್ರಾರು ಜನಗಳಿಗಾಗಿ ನಿಮ್ಮ ಹೃದಯ ಹಿಂಡುತ್ತದೆಯೇ? ಇದೆಲ್ಲವನ್ನೂ ನೋಡಿ ನಿಮ್ಮ ಮನಶ್ಶಾಂತಿಯನ್ನೂ ನಿದ್ರೆಯನ್ನೂ ಕಳೆದುಕೊಂಡಿದ್ದೀರಾ? ಹುಚ್ಚು ಹಿಡಿದಂತಾಗಿದೆಯೇ? ಕೀರ್ತಿ, ಐಶ್ವರ್ಯ, ಮನೆ, ಹೆಂಡತಿ, ಮಕ್ಕಳು ನಿಮ್ಮ ದೇಹ ಎಲ್ಲವನ್ನೂ ಮರೆತು ದೇಶಕ್ಕಾಗಿ ಕಳವಳಿಸುತ್ತೀರಾ? ಇಷ್ಟಿದ್ದರೆ ಮಾತ್ರ ದೇಶಭಕ್ತಿಗೆ ಇದು ಮೊದಲ ಮೆಟ್ಟಿಲೆಂದು ತಿಳಿಯಿರಿ.”** *–ಸ್ವಾಮಿ ವಿವೇಕಾನಂದ*

ಅತ್ಯಂತ ಶ್ರೇಷ್ಠರು ಯಾರು ಎಂಬುದಕ್ಕೆ ಬಸವಣ್ಣನವರು **ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಕೂಡಲಸಂಗನ ಶರಣರೇ ಕುಲಜರು** ಎನ್ನುತ್ತಾರೆ. ಅಂದರೆ ಭಗವಂತನಿಗೆ ಸಂಪೂರ್ಣ ಶರಣಾಗತರಾಗಿ, ಎಲ್ಲ ಜೀವಿಗಳಿಗೆ ಒಳ್ಳೆಯದಾಗಲಿ ಎಂದು ಬಯಸುವವರು, ಹಾರೈಸುವವರು, ಪ್ರಾರ್ಥಿಸುವವರು, ಒಳ್ಳೆಯದನ್ನೇ ಮಾಡುವವರು – ಇವರೇ ಮಾನವಶ್ರೇಷ್ಠರು ಎಂದ ಹಾಗಾಯಿತು. ಬರಿದೆ ಪ್ರಾರ್ಥಿಸುವುದೇನು, ಎಲ್ಲರಿಗೂ ಹಿತವನ್ನು ಉಂಟುಮಾಡುವಂತಹ ಸೇವಾಕಾರ್ಯಗಳಲ್ಲಿ ನಾವು ಅಂತಃಕರಣಪೂರ್ವಕವಾಗಿ ತೊಡಗಬೇಕು. ಅದು ಸಹ ಭಗವಂತನಿಗೆ ಸಲ್ಲಿಸಿದ ಪೂಜೆ ಆಗುತ್ತದೆ. ಎಲ್ಲರ ಅಂತರ್ಯಾಮಿಯಾಗಿರುವ ಭಗವಂತನೇ ಅವರ ಮೂಲಕ ನಮ್ಮ ಸೇವೆಯನ್ನು ಸ್ವೀಕರಿಸುತ್ತಾನೆ. ಸಕಲ ಪ್ರಾಣಿಗಳಲ್ಲಿ ದಯೆ, ಸಕಲ ಮಾನವರಲ್ಲಿ ಪ್ರೀತಿ, ದೇವರಿಗೆ ತೋರುವ ಭಕ್ತಿ – ಇವೆಲ್ಲವೂ ಒಂದೇ ಪ್ರೇಮದ ಬೇರೆ ಬೇರೆ ರೂಪಗಳು.

‘ಜನಸೇವೆಯೆ ಜನಾರ್ದನ ಸೇವೆ’ ಎಂಬ ಮಾತನ್ನು ಪೂಜೆ, ಆಧ್ಯಾತ್ಮಿಕ ಸಾಧನೆಗಳಲ್ಲಿ ತೊಡಗಿರುವ ಧಾರ್ಮಿಕರನ್ನು, ಭಕ್ತರನ್ನು ಕುರಿತೇ ಹೇಳಿದ್ದಾರೆಂಬುದು ಸ್ಪಷ್ಟ. ಭಕ್ತರು ಈ ಮಾತನ್ನು ಗಮನಿಸಬೇಕು. ಜನಾರ್ದನನಲ್ಲೇ ನಂಬಿಕೆ ಇಲ್ಲದವರಿಗೆ ಈ ಮಾತು ನಿರರ್ಥಕವಾಗುತ್ತದೆ. ದೇವರು, ಧರ್ಮಗಳಲ್ಲಿ ನಂಬಿಕೆ

ನಿವೃತ್ತ ಕಾಲೇಜು ಪ್ರಾಂಶುಪಾಲರಾದ ಶ್ರೀಯುತರು ಕನ್ನಡದ ಹಿರಿಯ ಸಾಹಿತಿಗಳು; ಆಶ್ರಮದ ಭಕ್ತರು.

ಇಲ್ಲದಿದ್ದರೂ ಮಾನವೀಯ ಅಂತಃಕರಣವಾದರೂ ಇರಬೇಕಲ್ಲವೆ? ದೇವರಿದ್ದಾನೆಂದು ನಂಬದೆ ಹೋದರೂ ಮಾನವೀಯತೆಯನ್ನಾದರೂ ನಂಬುತ್ತಾರಲ್ಲ. ಅಂತಹ ವಿಚಾರವಾದಿಗಳು ದಯೆ–ಅನುಕಂಪಗಳಿಂದ ಜನಸೇವೆಯನ್ನಾದರೂ ಮಾಡಿದರೆ ಸಾಕು. ಅವರು ಭಗವಂತನಿಗೆ ಪ್ರಿಯರಾಗುತ್ತಾರೆ.

## ಉಪಕಾರದಿಂದ ಸೇವೆಯೆಡೆಗೆ

ಪ್ರೇಮ, ಕರುಣೆ, ಅನುಕಂಪ, ಸ್ವಾರ್ಥತ್ಯಾಗ, ನಿಷ್ಕಾಮಸೇವೆ – ಇವೆಲ್ಲ ಶ್ರೇಷ್ಠವಾದ ಮಾನವೀಯ ಮೌಲ್ಯಗಳು. ಪ್ರತಿಯೊಂದು ಧರ್ಮವೂ ಈ ಮೌಲ್ಯಗಳನ್ನು ಸ್ವೀಕರಿಸಿದೆ. ಮಾನವೀಯತೆಗೆ ಆದ್ಯತೆಯನ್ನು ಕೊಟ್ಟಿದೆ. ಲೋಕಸಂಗ್ರಹಕ್ಕಾಗಿ ತಪಸ್ಸು ಮಾಡಿದವರು, ಯಜ್ಞಯಾಗಾದಿಗಳನ್ನು ಮಾಡಿದವರು, ಅಸೀಮವಾದ ತ್ಯಾಗ ಮಾಡಿದವರು ಭಾರತದ ಭವ್ಯವಾದ ಪರಂಪರೆಯಲ್ಲಿ ಅತ್ಯಂತ ಶ್ರೇಷ್ಠ ವ್ಯಕ್ತಿಗಳೆಂದು, ಮಹಾತ್ಮರೆಂದು ಪೂಜಿಸಲ್ಪಟ್ಟಿದ್ದಾರೆ. "ಪರೋಪಕಾರವೇ ಪುಣ್ಯ, ಪರಪೀಡನೆಯೇ ಪಾಪ" ಎಂಬ ವ್ಯಾಸರ ನುಡಿ ನಮ್ಮ ಇಡೀ ಧರ್ಮದ ಸಾರ!

'ಪರೋಪಕಾರ' ಎಂಬ ಮಾತು ಒಂದು ಕಾಲಕ್ಕೆ ನಿರ್ಮಲವಾದ ನಿಸ್ವಾರ್ಥವಾದ ಪ್ರೇಮದಿಂದ ಕಷ್ಟದಲ್ಲಿರುವ ಸಜ್ಜನರಿಗೆ ಸಹಾಯ ಮಾಡುವುದು ಎಂಬ ಅರ್ಥವನ್ನು ಪಡೆದಿತ್ತು. ವಿನಯ, ಪ್ರೇಮಗಳಿರುವವರೆಗೂ ಪರೋಪಕಾರ ಎಂಬ ಮಾತಿಗೆ ಯಾವ ಆಕ್ಷೇಪಣೆಯೂ ಇರಲಿಲ್ಲ. ಆದರೆ ಅದು ಮುಂದೆ ಕಾಲಕ್ರಮೇಣವಾಗಿ ವಿನಯ–ಪ್ರೀತಿಗಳ ಭಾವನೆಗಳನ್ನು ಕಳೆದುಕೊಂಡು ಸಹಾಯ ಮಾಡುವವರು ಮೇಲಿನವರು, ಸಹಾಯ ಪಡೆಯುವವರು ಕೀಳು, ಅಂತಹ ದೀನರಿಗೆ ಕೇವಲ ಕನಿಕರದಿಂದ ಸಹಾಯ ಮಾಡುತ್ತಿರುವೆನೆಂಬ ಧೋರಣೆ ಬೆಳೆದಾಗ ಪರೋಪಕಾರ ಎಂಬ ಮಾತು ಅಹಂಭಾವದ ಪ್ರತೀಕವಾಯಿತು. ಆದುದರಿಂದಲೇ ಪರಮಹಂಸರಿಗೆ 'ಉಪಕಾರ' ಎಂಬ ಪದ ಇಷ್ಟವಾಗುತ್ತಿರಲಿಲ್ಲ. "ಲೋಕೋಪಕಾರ ಎನ್ನಬೇಡಿ. ಸರ್ವವ್ಯಾಪಿಯಾದ ಭಗವಂತನಿಗೆ, ಎಲ್ಲರಲ್ಲಿಯೂ ನೆಲೆಸಿರುವ ಈಶ್ವರನಿಗೆ ಯಾರೂ ಉಪಕಾರ ಮಾಡಲಾರರು. ಸರ್ವಶಕ್ತನಿಗೆ ಯಾರ ಉಪಕಾರದ ಅಗತ್ಯವೂ ಇಲ್ಲ. ಸೇವೆ ಎನ್ನಿ" ಎಂದು ಅವರು ಹೇಳುತ್ತಿದ್ದರು.

ಸೇವೆ ಎನ್ನುವುದು ನಮ್ರತೆಯ ಚಿಹ್ನೆ. ಜೀವನದಲ್ಲಿ ಸೇವೆಗೆ ಅವಕಾಶ ಸಿಕ್ಕುವುದೂ ಒಂದು ಭಾಗ್ಯವೇ ಎಂದು ಭಾವಿಸಿ ನಮ್ಮ ಕೈಲಾದಷ್ಟು ಜನತೆಯ ಸೇವೆ ಮಾಡಬೇಕು. ಏನು ಮಾಡಿದರೂ ಈಶ್ವರಸೇವೆ ಎಂದು ಸಮರ್ಪಣ ಭಾವದಿಂದ ಮಾಡಬೇಕು. ಆ ಸೇವೆಯಿಂದ ಜನರ ಎಲ್ಲ ಕಷ್ಟಗಳೂ ದೂರವಾಗುತ್ತವೆ ಎಂದಲ್ಲ. ಎಲ್ಲ ಸಮಸ್ಯೆಗಳೂ ಬಗೆಹರಿಯುತ್ತವೆ ಎಂದಲ್ಲ. ದೀನ–ದಲಿತರ ಉದ್ಧಾರ, ಹರಿಜನೋದ್ಧಾರ ಇತ್ಯಾದಿ ಮಾತುಗಳೆಲ್ಲ ಅಹಂಕಾರ ಜನ್ಯವಾದವು; ನಿಜವಾಗಿ ಆಗುವುದು ನಿಸ್ವಾರ್ಥವಾಗಿ ಸೇವೆ ಮಾಡುವವರ ಆತ್ಮೋದ್ಧಾರ.

ಇತ್ತೀಚಿನ ದಿನಗಳಲ್ಲಿ 'ಸೇವೆ', 'ಜನತಾ ಸೇವೆ' ಎಂಬ ಮಾತುಗಳೂ ಭಯ, ಸಂಶಯಗಳಿಗೆ ಕಾರಣವಾಗುತ್ತಿವೆ. ಹಣ, ಕೀರ್ತಿ, ಅಧಿಕಾರ ಮುಂತಾದ ಸ್ವಾರ್ಥಲಾಭಗಳಿಗಾಗಿ ಸಮಾಜಸೇವಕರು, ದೇಶಸೇವಕರು ಮಾಡುವ 'ಸೇವೆ'ಯ ಫಲವನ್ನು ನಮ್ಮ ದೇಶ ಸಾಕಷ್ಟು ಅನುಭವಿಸಿ ನರಳುತ್ತಿದೆ! ಈ 'ಸೇವೆ'ಯ ಅಬ್ಬರ–ಆಡಂಬರಗಳನ್ನು ದೇಶಾದ್ಯಂತ ನೋಡುತ್ತಿರುವ ನಮಗೆ 'ಸೇವೆ' ಎಂಬ ಮಾತು ಮೋಸ, ಕಪಟಗಳಿಗೆ ಮತ್ತೊಂದು ಹೆಸರಾಗಿ ಕಾಣುತ್ತಿದೆ!

ಶ್ರೀರಾಮಕೃಷ್ಣ ಪರಮಹಂಸರಾಗಲಿ, ವಿವೇಕಾನಂದರಾಗಲಿ ಹೇಳಿದುದು ಇಂತಹ ಸೇವೆಯನ್ನಲ್ಲ. ಮಾನವಾಂತಃಕರಣದಿಂದ ಕೂಡಿದ ಸೇವೆಯನ್ನು. ಸಂಸಾರ–ಸಮಾಜ ಎಂದು ಹಚ್ಚಿಕೊಂಡಿರುವ ಗೃಹಸ್ಥರಿಗಂತೂ ಇದು ಸಹಜಧರ್ಮವೇ ಆಗಿರುತ್ತದೆ. ಸರ್ವಸಂಗ ಪರಿತ್ಯಾಗ ಮಾಡಿ ಸಂನ್ಯಾಸಿಗಳಾಗಿರುವವರಿಗೂ ಶ್ರೀರಾಮಕೃಷ್ಣರು ದರಿದ್ರನಾರಾಯಣ ಸೇವೆಯನ್ನು ಒಂದು ವ್ರತವಾಗಿ ಕಟ್ಟುಪಾಡು ಮಾಡಿದರು. ಅವರ ಆಶಯ–ಆದೇಶಗಳಂತೆ ಮುಂದೆ ಅವರ ಅಂತರಂಗ ಶಿಷ್ಯರಾದ ಸ್ವಾಮಿ ವಿವೇಕಾನಂದರ ನೇತೃತ್ವದಲ್ಲಿ ಶ್ರೀರಾಮಕೃಷ್ಣ ಮಹಾಸಂಘ ಸ್ಥಾಪಿತವಾಯಿತು. 'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ' ಎಂಬುದು ಈ ಸಂಸ್ಥೆಯ ದೀಕ್ಷಾಮಂತ್ರವಾಯಿತು.

## ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ

ಆತ್ಮೋದ್ಧಾರಕ್ಕಾಗಿ ವ್ಯಕ್ತಿ ಸಾಧನೆ–ತಪಸ್ಸು ಮಾಡಬೇಕು. ಹಾಗೆಂದು ಕಾನನಾಂತರದ, ಗಿರಿಗಹ್ವರಗಳ ಏಕಾಂತಸ್ಥಳಗಳಿಗೆ ಹೋಗಬೇಕೆಂದೇನೂ ಇಲ್ಲ. ಅಲ್ಲದೆ ವೈಯಕ್ತಿಕ ಆತ್ಮಸಾಧನೆಯಲ್ಲೇ ಮುಳುಗಿ ಸಾಮಾಜಿಕ ಜವಾಬ್ದಾರಿಯನ್ನು ಮರೆಯಬಾರದು. ಅದರಿಂದ ತಪ್ಪಿಸಿಕೊಳ್ಳಲು ಪಲಾಯನ ಮಾಡಬಾರದು. ಸಮಾಜದ, ಸಮಷ್ಟಿಯ ಹಿತಕ್ಕಾಗಿ ಜೀವನವನ್ನು ಮುಡಿಪಾಗಿಟ್ಟು, ಕಂಕಣಬದ್ಧರಾಗಿ ಸೇವಾಕಾರ್ಯವನ್ನು ಕೈಗೊಳ್ಳಬೇಕು. ಇದಕ್ಕೆ ಪೂರಕವಾಗಿ, ಸಮಾಜದ ಮಧ್ಯೆ ಇದ್ದುಕೊಂಡೇ ವೈಯಕ್ತಿಕ ಸಾಧನೆಯಾಗಿ ಧ್ಯಾನ, ಪ್ರಾರ್ಥನೆ, ಸ್ವಾಧ್ಯಾಯಗಳಲ್ಲಿಯೂ ತೊಡಗಿರಬೇಕು. ಇಂದ್ರಿಯನಿಗ್ರಹ ಮಾಡಿ, ಸತ್ಸಂಗತ್ವದಲ್ಲಿ ನಿಸ್ಸಂಗತ್ವವನ್ನು ಸಾಧಿಸಿ, ನಿರ್ಮೋಹತ್ವದ ನಿರ್ಮಲ ತತ್ತ್ವವನ್ನು ಅಳವಡಿಸಿಕೊಂಡು ಆತ್ಮಾನುಭವದಲ್ಲಿ ನಿಲ್ಲುವುದೇ ನಿಜವಾದ ಸಂನ್ಯಾಸ. ಅಲ್ಲದೆ ಲೋಕಹಿತಕ್ಕಾಗಿ ನಿಸ್ವಾರ್ಥ ಸೇವಾಕಾರ್ಯದಲ್ಲಿ ತೊಡಗುವುದು ಸಹ ಒಂದು ಆಧ್ಯಾತ್ಮಿಕ ಸಾಧನೆಯೇ. ಸೇವೆಯಲ್ಲಿ ಪರಿಶುದ್ಧವಾದ ಪ್ರೇಮದ ಸಂಪಾದನೆ ಆಗುತ್ತದೆ. ಸ್ವಾರ್ಥ ಮತ್ತು ಅಹಂಗಳು ನಿರ್ಮೂಲವಾಗುತ್ತವೆ. ನಾವು ಭಗವಂತನಿಂದ ಬಳುವಳಿಯಾಗಿ ಪಡೆದಿರುವ ಶರೀರ, ವಿದ್ಯಾಬುದ್ಧಿಗಳು ಬಹುಜನರಿಗೆ ಉಪಯೋಗವಾಗಿ ಸಾರ್ಥಕವಾಗುತ್ತವೆ.

ಈ ಹಿರಿಯ ಧ್ಯೇಯಾದರ್ಶಗಳಿಗೆ ಬದ್ಧವಾಗಿ ಶ್ರೀರಾಮಕೃಷ್ಣ ಮಹಾಸಂಘವು ನಮ್ಮ ದೇಶದಲ್ಲಿ ಕ್ಷಾಮ, ಸಾಂಕ್ರಾಮಿಕ ರೋಗ, ಚಂಡಮಾರುತ, ಪ್ರವಾಹ ಮುಂತಾದ ಸಂಕಟ ಪರಿಸ್ಥಿತಿಗಳಲ್ಲೆಲ್ಲ

ಸಂತ್ರಸ್ತರಿಗೆ ಅನ್ನ, ವಸ್ತ್ರ, ಔಷಧಿಗಳನ್ನೊದಗಿಸಿ ಪ್ರೀತಿಯ ಮಾತುಗಳಿಂದ ಸಮಾಧಾನ, ಸಾಂತ್ವನಗಳನ್ನುಂಟುಮಾಡುತ್ತ ಅಪಾರವಾದ ಸೇವೆಯನ್ನು ಸಲ್ಲಿಸಿ, ಒಳ್ಳೆಯ ಮೇಲ್ಪಂಕ್ತಿಯನ್ನು ಹಾಕುತ್ತಿದೆ. ಈ ಸೇವಾಕಾರ್ಯದಿಂದ ಸ್ಫೂರ್ತಿ ಪಡೆದು ಹಲವಾರು ಬೇರೆ ಬೇರೆ ಸೇವಾಸಂಘಗಳು ಸಹ ದೇಶಾದ್ಯಂತ ಹುಟ್ಟಿವೆ.

## ದಿವ್ಯತ್ರಯರ ಮೇಲ್ಪಂಕ್ತಿ

"ಲೋಕಸಂಗ್ರಹಕಾರ್ಯಕ್ಕಾಗಿ ಭಗವಂತನೇ ಕರುಣೆಯಿಂದ ಮನುಷ್ಯರೂಪದಲ್ಲಿ ಆಗಾಗ ಅವತರಿಸಿ ಬರುತ್ತಾನೆ. ಈ ಜಗತ್ತಿನಲ್ಲಿ ಕರ್ಮವಶರಾಗಿ ವಿಧಿಯಿಲ್ಲದೆ ಹುಟ್ಟಿಬರುವವರೇ ತುಂಬಿದ್ದರೂ, ಲೋಕ ಕಾರುಣ್ಯದಿಂದ ಜೀವಿಗಳ ದುಃಖ ನೋಡಲಾರದೆ, ಅವರ ಉದ್ಧಾರಕ್ಕೆಂದೇ ಹುಟ್ಟುವ ಮುಕ್ತಾತ್ಮರೂ ಇದ್ದಾರೆ. ಅವರನ್ನು ನಿತ್ಯಮುಕ್ತರು ಎನ್ನುತ್ತಾರೆ. ಅವರನ್ನು ಯಾವ ಕರ್ಮವೂ ಬಾಧಿಸುವುದಿಲ್ಲ. ಅವರು ಸ್ವತಃ ಲೋಕದ ನಾನಾ ನೋವು, ಕಷ್ಟಗಳನ್ನು ಅನುಭವಿಸಿಯಾದರೂ ದೀನರ, ದುಃಖಿಗಳ ಸೇವೆ ಮಾಡುತ್ತಾರೆ" ಎಂದು ಪರಮಹಂಸರು ಹೇಳುತ್ತಿದ್ದರು. ಸೇವೆ ಎಂತಹ ಪವಿತ್ರವಾದ ಕಾರ್ಯ ಎಂದು ಇದರಿಂದ ಅರ್ಥವಾಗುತ್ತದೆ.

ಶ್ರೀರಾಮಕೃಷ್ಣರೇ ಭಗವತ್ ಸಾಕ್ಷಾತ್ಕಾರದ ಆನಂದವನ್ನೂ ಬೆಳಕನ್ನೂ ಪಡೆದ ಮೇಲೂ ಲೋಕಕಲ್ಯಾಣದ ಬೃಹತ್ ಯೋಜನೆ ಹಾಕಿಕೊಂಡರು. ಈ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಲು ಸಕಲ ಸಿದ್ಧತೆಗಳನ್ನೂ ಪಡೆದುಕೊಂಡೇ ಹುಟ್ಟಿ ಬಂದಿದ್ದಾನೆ ಎಂದು ಯುವಕ ನರೇಂದ್ರನನ್ನು ಗುರುತಿಸಿದರು. ಎಲ್ಲರಿಗೂ ಆತನನ್ನು ತೋರಿಸುತ್ತ "ನೋಡಿ, ನೋಡಿ, ಅವನು ಸಹಸ್ರದಲಪದ್ಮ" ಎಂದು ಸಂತೋಷ ವ್ಯಕ್ತಪಡಿಸಿದರು.

ನಿರ್ವಿಕಲ್ಪ ಸಮಾಧಿಯ ಅಮೃತಾನುಭವವನ್ನು ಒಂದು ಸಲ ನರೇಂದ್ರನಿಗೆ ತೋರಿಸಿದ ಬಳಿಕ, ಶ್ರೀರಾಮಕೃಷ್ಣರು ಹೀಗೆಂದರು, "ಸಾಕು, ಇನ್ನು ಈ ಅನುಭವದ ಬಾಗಿಲನ್ನು ಮುಚ್ಚಿ ಬೀಗ ಹಾಕಿದ್ದೇನೆ. ಬೀಗದ ಕೈ ನನ್ನ ಬಳಿ ಇರಲಿ. ಜಗನ್ಮಾತೆಯ ಲೋಕ ಕಲ್ಯಾಣ ಕಾರ್ಯಗಳನ್ನೆಲ್ಲ ನೀನು ಮಾಡಿ ಮುಗಿಸಿದ ಬಳಿಕ ನಾನೇ ಆ ಬೀಗ ತೆಗೆಯುತ್ತೇನೆ."

ಒಮ್ಮೆ ನರೇಂದ್ರ ಗುರುವರ್ಯರನ್ನು, "ನಾನು ಸರ್ವದಾ ಆ ಆನಂದ ಸ್ಥಿತಿಯಲ್ಲಿರಲು ಬಯಸುತ್ತೇನೆ, ಅನುಗ್ರಹಿಸಿರಿ" ಎಂದು ಪ್ರಾರ್ಥಿಸಿಕೊಂಡಾಗ, "ಛೇ, ಎಂಥಾ ಸ್ವಾರ್ಥ ನಿನ್ನದು. ನಾನೇನೊ ನೀನು ದೊಡ್ಡ ವಟವೃಕ್ಷವಾಗಿ ಬೆಳೆದು ಸಹಸ್ರಾರು ಜೀವಿಗಳಿಗೆ ಆಶ್ರಯ ಕೊಡುತ್ತೀ ಎಂದುಕೊಂಡರೆ ಕೇವಲ ನಿನ್ನ ಉದ್ಧಾರವನ್ನು ಮಾತ್ರ ಬೇಡುತ್ತೀಯಾ" ಎಂದು ನರೇಂದ್ರನ ಆಶಯಕ್ಕೆ ಪ್ರೀತಿಯ ತಡೆ ಹಾಕಿದರು.

ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದರ ಹಾಗೆಯೇ ಶ್ರೀಮಾತೆ ಶಾರದಾದೇವಿಯವರ ಹೃದಯವೂ ಲೋಕದ ದುಃಖ, ದೀನದಲಿತರ ಸಂಕಟಗಳಿಗಾಗಿ ದಯಾರ್ದ್ರವಾಗಿ ಮಮ್ಮಲ ಮರುಗುತ್ತಿತ್ತು.

ಜೀವನದಲ್ಲಿ ನಾನಾ ತಪ್ಪುಗಳನ್ನೂ, ಪಾಪಗಳನ್ನೂ ಮಾಡಿದವರು ಪಶ್ಚಾತ್ತಾಪದಿಂದ ಶುದ್ಧರಾಗಿ ಆಶ್ರಯ ಬೇಡಿ ಬಂದಾಗ, ಸಮಾಜದಿಂದ ಪರಿತ್ಯಕ್ತರಾದವರು ದುಃಖಿತರಾಗಿ ಕೃಪೆ ಬೇಡಿ ಬಂದಾಗ, ಶ್ರೀಮಾತೆಯವರ ವಿಶೇಷವಾದ ಕರುಣಾ ಪ್ರವಾಹ ಅವರ ಮೇಲೆಲ್ಲಾ ಅವ್ಯಾಜವಾಗಿ ಹರಿಯುತ್ತಿತ್ತು. ಅವರೆಲ್ಲ ಅವರ ವಾತ್ಸಲ್ಯದ ಹೊಳೆಯಲ್ಲಿ ಮಿಂದು ಪರಿಶುದ್ಧರಾಗುತ್ತಿದ್ದರು.

ಶ್ರೀಮಾತೆಯವರು ಒಮ್ಮೆ ಜ್ವರ ಬಂದು ನರಳುತ್ತಿರುವಾಗ ಸಹ ದೂರದಿಂದ ದರ್ಶನ ಮಾಡಲು ಬಂದವರೊಬ್ಬರನ್ನು ಒಳಗೆ ಬಿಡಲು ಹೇಳಿದರು. ಹಸಿದು ಬಂದವರಿಗೆ ಅನ್ನ; ನೊಂದವರಿಗೆ ಒಂದು ಸಾಂತ್ವನದ ನುಡಿ; ತಾವು ಪತಿತರು, ಪಾಪಿಗಳು ಎಂದು ಪಶ್ಚಾತ್ತಾಪದಿಂದ ಬೇಯುತ್ತಿರುವವರಿಗೆ ಒಂದು ಧೈರ್ಯದ, ಭರವಸೆಯ ಮಾತು – ಇವು ಶ್ರೀಮಾತೆಯವರ ದಿನಚರಿಯ ಅವಿಭಾಜ್ಯ ಅಂಗವಾಗಿದ್ದವು. ಹೀನಕುಲದವರೆಂದು ತಿಳಿದು ದೂರ ನಿಂತವರನ್ನು ಅವರು ಹತ್ತಿರಕ್ಕೆ ಕರೆದು ಕೂರಿಸಿ, ಊಟ ಮಾಡಿಸಿ, ಎಂಜಲನ್ನೂ ತಾವೇ ಎತ್ತಿ, ತಮ್ಮ ಅಪಾರವಾದ ಪ್ರೀತಿ ಅನುಕಂಪಗಳನ್ನು ತೋರುತ್ತಿದ್ದರು. ಪತಿತರನ್ನೂ ಕೆಟ್ಟವರನ್ನೂ ಹತ್ತಿರಕ್ಕೆ ಸೇರಿಸಬೇಡಿ ಎಂದು ಹೇಳಿದವರಿಗೆ, "ಠಾಕೂರರು ಹುಟ್ಟಿಬಂದದ್ದು ಏಕೆ ಮತ್ತೆ? ಕೇವಲ ರಸಗುಲ್ಲಾ ತಿನ್ನುವುದಕ್ಕೇನು? ಇಂತಹವರನ್ನು ಉದ್ಧಾರ ಮಾಡುವುದಕ್ಕೆಂದೇ ಪರಮಾತ್ಮನು ಅವತರಿಸುವುದು. ನಾವೇ ಅವರನ್ನು ದೂರ ಮಾಡಿದರೆ ಅವರ ಗತಿ ಏನು?" ಎನ್ನುತ್ತಿದ್ದರು.

ಶ್ರೀರಾಮಕೃಷ್ಣರು ತಾವು ದೇಹತ್ಯಾಗ ಮಾಡುವ ಕೆಲದಿನಗಳ ಮುಂಚೆ ಶ್ರೀಶಾರದಾದೇವಿಯವರಿಗೆ, "ಸುತ್ತಲೂ ಜನರು ಅಜ್ಞಾನದ ಕತ್ತಲೆಯಲ್ಲಿ ತೊಳಲುತ್ತಿದ್ದಾರೆ. ನೀನು ಅವರನ್ನು ಉದ್ಧರಿಸಬೇಕು" ಎಂದು ಹೇಳಿದರು. ಪತಿಯಂತೆಯೇ ಅವರೂ ಜಪ, ತಪ, ಸಾಧನೆ ಮಾಡಿ ಅತ್ಯುನ್ನತ ಆಧ್ಯಾತ್ಮಿಕ ಸ್ಥಿತಿಯನ್ನು ಮುಟ್ಟಿದ್ದರೂ, ಲೋಕದ ದುಃಖಕ್ಕಾಗಿ ಮರುಗಿ ತಮ್ಮ ಬಳಿಗೆ ಬಂದವರಿಗೆ ಧೈರ್ಯ ಸಮಾಧಾನ ಉಪದೇಶಗಳನ್ನಿತ್ತು ಆಶೀರ್ವದಿಸುತ್ತಿದ್ದರು.

ಇಂತಹ ಮಾನವೀಯ ಕರುಣೆ, ಪ್ರೀತಿ, ಅನುಕಂಪಗಳೇ ಧರ್ಮದ ತಿರುಳು, ನಿಜವಾದ ಅಧ್ಯಾತ್ಮದ ಲಕ್ಷಣ. ಇಂತಹ ಹೃದಯದಿಂದ ಮಾಡುವ ಸೇವೆಯೇ ನಿಜವಾದ ಮತ್ತು ಶ್ರೇಷ್ಠವಾದ ಪೂಜೆ.

## ಸ್ವಾಮಿ ವಿವೇಕಾನಂದರ ಸೇವಾದೀಕ್ಷೆ

ಧರ್ಮದ ತಿರುಳನ್ನರಿಯದೆ ಮಾನವೀಯತೆಯನ್ನು ಮರೆತು ಸಂಪ್ರದಾಯಶರಣರಾದ ಹೃದಯವಿಹೀನರಿಂದಲೇ. ಸಹಸ್ರಾರು ಜನ ಅಮೃತಪುತ್ರರೆನಿಸಬೇಕಾದ ಮಾನವರು ಪಶುಗಳಿಗಿಂತ ಹೀನವೆಂದು ಪರಿಗಣಿತರಾಗಿ ಅಂತ್ಯಜರಾಗಿರುವುದು. ಎಲ್ಲ ಧರ್ಮಗಳ ದೇವಸ್ಥಾನಗಳು, ಮಠಗಳು, ಪ್ರಾರ್ಥನಾಮಂದಿರಗಳು, ದೇವರು ಧರ್ಮ ಎಲ್ಲವೂ ಜನಸಾಮಾನ್ಯರನ್ನು ಮೌಢ್ಯಕೂಪಕ್ಕೆ ತಳ್ಳುವ ಶೋಷಿಸುವ ಸಾಧನಗಳಾಗಿರುವುದು ಇಂತಹ ಸ್ವಾರ್ಥ

ಹಾಗೂ ಸಂಕುಚಿತ ಭಾವನೆಯವರಿಂದಲೇ. ದೇವರು–ಧರ್ಮ ಎಂಬ ಪವಿತ್ರ ಭಾವನೆಗಳಿಗೆ ವೃಥಾ ಕಳಂಕ ಬಂದಿರುವುದು ಮಾನವೀಯ ಅಂತಃಕರಣವಿಲ್ಲದ ಗೊಡ್ಡು ಕರ್ಮಠರಿಂದಲೇ.

ಪರಿವ್ರಾಜಕರಾಗಿ ಭಾರತವನ್ನೆಲ್ಲ ಸುತ್ತಿ ಬರುವಾಗ ವಿವೇಕಾನಂದರು ಜನತೆಯ ಅಜ್ಞಾನ, ಕಿತ್ತು ತಿನ್ನುವ ಬಡತನ, ಕಷ್ಟ–ದುಃಖಗಳನ್ನು ಕಣ್ಣಾರೆ ಕಂಡರು. ಈ ದೀನ ಬಾಂಧವರ ದುಃಖವನ್ನು ಹೇಗೆ ನಿವಾರಣೆ ಮಾಡಲಿ, ಇವರ ಹಸಿವು, ಅಜ್ಞಾನಗಳನ್ನು ಹೇಗೆ ನೀಗಿಸಲಿ, ಇಡೀ ದೇಶವನ್ನು ಪೀಡಿಸುತ್ತಿರುವ ಸಾಮಾಜಿಕ ಆರ್ಥಿಕ ಅಸಮಾನತೆ, ಜಾತೀಯತೆ, ನಿರುದ್ಯೋಗ ಮುಂತಾದ ನೂರಾರು ಸಮಸ್ಯೆಗಳನ್ನು ಬಿಡಿಸುವುದು ಹೇಗೆ ಎಂದು ಅವರು ರಾತ್ರಿ ಹಗಲೂ ಚಿಂತಿಸತೊಡಗಿದರು. ಅಸ್ಪೃಶ್ಯತೆ, ದುರ್ಬಲರ ಶೋಷಣೆಗಳನ್ನು ಕಂಡು ಅವರಿಗೆ ರೋಷ ಉಕ್ಕಿತು.

ತಮ್ಮ ಗುರುವಿನಂತೆ ಇವರೂ "ಹಸಿದವರಿಗೆ ಮೊದಲು ಕೊಡಬೇಕಾದದ್ದು ಅನ್ನ; ವೇದಾಂತವಲ್ಲ. ಹಸಿದ ಹೊಟ್ಟೆ, ಅಧ್ಯಾತ್ಮ–ತತ್ತ್ವೋಪದೇಶಗಳಿಂದ ತುಂಬುತ್ತದೆಯೇ? ಇಹದಲ್ಲಿ ಒಂದು ಚೂರು ರೊಟ್ಟಿಯನ್ನೂ ಕೊಡದೆ ಪರದಲ್ಲಿ ಸ್ವರ್ಗಸುಖವನ್ನು ಕೊಡುತ್ತೇನೆನ್ನುವ ದೇವರು ನನಗೆ ಬೇಡ" ಎಂದು ಗುಡುಗಿದರು. ದರಿದ್ರನಾರಾಯಣನ ಸೇವಾದೀಕ್ಷೆಯನ್ನು ಕೈಕೊಂಡ ಸ್ವಾಮಿ ವಿವೇಕಾನಂದರ ದಿವ್ಯವಾಣಿ ಹೀಗೆ ಮೊಳಗಿತು:

"ಇನ್ನು ಐವತ್ತು ವರ್ಷಗಳವರೆಗೆ ನಿಮ್ಮ ದೇವದೇವತೆಗಳನ್ನೆಲ್ಲ ಮನಸ್ಸಿನಿಂದ ತಳ್ಳಿಬಿಡಿ. ನಮ್ಮ ಭಾರತಾಂಬೆಯೇ ನಮ್ಮ ದೇವರಾಗಲಿ. ನಿರ್ಜೀವ ವಿಗ್ರಹಾರಾಧನೆಯನ್ನು ತೊರೆದು ಸಜೀವ ಮಾನವಾರಾಧನೆಯನ್ನು ಕೈಗೊಳ್ಳಿ. ದೇಶಸೇವೆಯೇ ಈಶಸೇವೆ. ನರನ ಸೇವೆಯೇ ಹರನ ಸೇವೆ....."

ಈ ಸ್ಫೂರ್ತಿಯುತ ವಾಣಿಯಿಂದ ನವಚೈತನ್ಯದ ಹೊಳೆ ಹರಿಯಿತು. ಹೀಗೆ ಸ್ವಾಮೀಜಿ ತಮ್ಮ ಸಿಂಹಗರ್ಜನೆಯಿಂದ ಭಾರತೀಯರನ್ನು ಎಚ್ಚರಿಸಿದ್ದಷ್ಟೇ ಅಲ್ಲ, ನಿರ್ದಿಷ್ಟವಾದ ಕಾರ್ಯಯೋಜನೆ ಸಹ ಹಾಕಿಕೊಟ್ಟರು. ಕವಿ ಕುವೆಂಪು ಹೇಳುವಂತೆ ಶ್ರೀರಾಮಕೃಷ್ಣರು ದೇವಗಂಗೆಯನ್ನು ಇಳೆಗೆ ತಂದರು. ಇದಕ್ಕೆ ಕಾಲುವೆಗಳನ್ನು ಮಾಡಿ ಲೋಕೋಪಯೋಗಕ್ಕೆ ಪವಿತ್ರ ಜಲವನ್ನೊದಗಿಸಿದವರು ಸ್ವಾಮಿ ವಿವೇಕಾನಂದರು. ಕಾಲುವೆಗಳು ಇರದ ದೂರದ ಅಜ್ಞಾತ ಜನಸಾಮಾನ್ಯರ ದೈನಂದಿನ ಜೀವನಕ್ಕೆ ನೀರೊದಗಿಸಿ ಬಾಯಾರಿಕೆ ಕಳೆದವರು ಶ್ರೀಮಾತೆ ಶಾರದಾದೇವಿಯವರು.

ಎಂಟುನೂರು ವರ್ಷಗಳ ಕೆಳಗೆ ಬಸವಣ್ಣನವರೂ ಇಂತಹ ವಿಚಾರಗಳನ್ನು ಪ್ರತಿಪಾದಿಸಿ ದೊಡ್ಡ ಕ್ರಾಂತಿಯನ್ನೇ ಮಾಡಿದರು:

ಕಲ್ಲನಾಗರ ಕಂಡರೆ ಹಾಲನೆರೆ ಎಂಬರು
ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯ
ಉಂಬ ಜಂಗಮ ಬಂದರೆ ಅತ್ತ ಸರಿ ಎಂಬರು
ಉಣ್ಣದ ಲಿಂಗಕ್ಕೆ ಬೋನವ ಹಿಡಿ ಎಂಬರಯ್ಯ

ಪ್ರತಿ ಮಾನವನಲ್ಲೂ ದೈವತ್ವವನ್ನು ಕಂಡು, ಮೊದಲು ಮಾನವರ ಸೇವೆ ಮಾಡಿರಿ ಎಂದು ನುಡಿದು ನಡೆದ ಬಸವಣ್ಣ, ಶ್ರೀರಾಮಕೃಷ್ಣ ಪರಮಹಂಸರು ಮುಂತಾದ ಮಹಾತ್ಮರು ಜನಸೇವೆಯ ಮಹತ್ವವನ್ನು ಲೋಕಕ್ಕೆಲ್ಲಾ ಸಾರಿದ್ದಾರೆ.

## ಸಮಾಜಸೇವೆ

'ಸಮಾಜಸೇವೆ' ಎಂದ ಕೂಡಲೆ ನಿರ್ಗತಿಕರಿಗೆ, ಭಿಕ್ಷುಕರಿಗೆ ಒಂದು ದಿನ ಹೋಗಿ ಅನ್ನಹಾಕುವುದು ಎಂಬ ಅರ್ಥ ಬಂದುಬಿಟ್ಟಿದೆ. ಸಮಾಜಸೇವೆ ಎಂದ ಕೂಡಲೆ, ಕೊಳಚೆ ಪ್ರದೇಶಗಳಿಗೆ ಹಳ್ಳಿಗಳಿಗೆ ಹೋಗಿ ಓಣಿಗಳನ್ನು ಗುಡಿಸುವುದು, ಆಸ್ಪತ್ರೆಗಳಿಗೆ ಹೋಗಿ ಬಡರೋಗಿಗಳಿಗೆ ಹಣ್ಣು ಹಂಚುವುದು, ಬಡಬಗ್ಗರಿಗೆ ಅನಾಥಾಲಯಗಳಿಗೆ ಹಳೆಯ ಬಟ್ಟೆ, ಹೊದಿಕೆಗಳನ್ನು ಕೊಟ್ಟು ಬರುವುದು ಎಂದು ತಿಳಿಯುತ್ತೇವೆ.

ಇಂತಹ ಕಾರ್ಯಗಳು ಆಗುವುದು ಯಾವುದೋ ಒಂದು ದಿನ. ಅದೂ ಸೇವಾಕಾರ್ಯದ ಪಟ್ಟಿಯಲ್ಲಿ ಇದಾಯಿತು ಇದಾಯಿತು ಎಂದು ಗುರುತು ಮಾಡುವುದಕ್ಕಾಗಿಯೆ ಎಂಬಂತೆ. ರೋಗಿಗಳಿಗೆ ಒಂದು ಹಣ್ಣನ್ನೊ, ಬ್ರೆಡ್ಡನ್ನೊ, – ಕೊಂಚ ಹಾಲನ್ನೊ ಕೊಟ್ಟು ಬಂದುಬಿಟ್ಟರೆ ಮಹತ್ಸಾಧನೆ ಮಾಡಿದೆವು; ದೊಡ್ಡ ಸಮಾಜಸೇವೆ ಎಂದು ತಿಳಿಯುವುದು ಎಷ್ಟು ಹಾಸ್ಯಾಸ್ಪದ! ಸೇವಾ ಮನೋಧರ್ಮದಲ್ಲಿರಬೇಕಾದುದು ಪ್ರೀತಿಯ ಅಂತಃಕರಣ, ದಯೆ–ಅನುಕಂಪೆಗಳಿಂದ ಕೂಡಿದ ಹೃದಯ, ಅಹಂಭಾವವಿಲ್ಲದ ಆರ್ದ್ರತೆ, ವಿನಯ, ತ್ಯಾಗಶೀಲತೆ.

ಉಚಿತವಾಗಿ ಮಾಡುವ ಅನ್ನದಾನವಷ್ಟೇ ನಾರಾಯಣ ಸೇವೆ ಅಲ್ಲ. ಅನ್ನದಾನ, ವಸ್ತ್ರದಾನ, ಔಷಧಿದಾನ ಇತ್ಯಾದಿ ಹಲವು ಸೇವಾಕಾರ್ಯಗಳಿವೆ ನಿಜ. ಆದರೆ ಇವೆಲ್ಲ ತಾತ್ಕಾಲಿಕ ಪರಿಹಾರವನ್ನು ಮಾತ್ರ ಒದಗಿಸುತ್ತವೆ. ಪರರ ದುಃಖವನ್ನು ಕಷ್ಟಗಳನ್ನು ನೋಡಿ ಮರುಗಿ, ಅವರಿಗೆ ಏನಾದರೂ ನೆರವನ್ನು ನೀಡಬೇಕೆಂದು ಕಾತರಿಸುವ ಈ ಹೃದಯವಂತಿಕೆ ಒಳ್ಳೆಯದೆ. ಆದರೆ ಇದು ಬಡತನದ ಸಮಸ್ಯೆಯ ಮೂಲವನ್ನೇ ಕಿತ್ತುಹಾಕಲಾರದು. ಬಡವರೂ ಮನುಷ್ಯರು, ಪಶುಗಳಲ್ಲ. ಅವರೂ ಆತ್ಮಗೌರವ – ಸ್ವಾಭಿಮಾನಗಳನ್ನಿಟ್ಟುಕೊಂಡು ಬದುಕುವಂತಹ ವಾತಾವರಣ ಹಾಗೂ ಅವಕಾಶಗಳಿರುವಂತಹ ವ್ಯವಸ್ಥೆಯನ್ನು ರೂಪಿಸಬೇಕು. ಅವರಿಗೆ ಅಗತ್ಯವಾದ ಶಿಕ್ಷಣ, ತರಬೇತಿಗಳನ್ನು ಕೊಟ್ಟು ಸ್ವಾವಲಂಬಿಗಳಾಗಿ ದುಡಿಯುವುದಕ್ಕೆ ಉದ್ಯೋಗಾವಕಾಶಗಳನ್ನು ಕಲ್ಪಿಸಬೇಕಾದುದು ಬಹು ಮುಖ್ಯ. ದೀನರಾಗಿ ಆಲಸಿಗರಾಗಿ ಸದಾ ಬೇಡಿ ತಿನ್ನುವ ಮನೋಧರ್ಮವನ್ನು ಅವರಲ್ಲಿ ಬೆಳೆಸಬಾರದು. ಆತ್ಮಾಭಿಮಾನಿಗಳಾಗಿ ಸ್ವತಃ ದುಡಿದು ತಿನ್ನುವ, ಯಾರ ಮುಂದೂ ಕೈಯೊಡ್ಡದಿರುವ ಕೆಚ್ಚನ್ನು, ಸ್ವಾಭಿಮಾನವನ್ನು ಬೆಳೆಸಬೇಕು.

ಸಮಾಜಸೇವೆ ಎಂದರೆ ಸಮಾಜದ ಜನರಿಗಾಗಿ ಮಾಡುವ ಉಚಿತ ಸೇವೆ ಅಲ್ಲ. ಜನರೊಂದಿಗೆ ನಾವೂ ಬೆರೆತು ಅವರ ಉದ್ಧಾರ ಅವರ ಕೈಯಲ್ಲೇ ಇರುವುದನ್ನು ಪ್ರತ್ಯಕ್ಷ ಪ್ರಯೋಗಗಳಿಂದ ತೋರಿಸಿ

ಕೊಡುವುದು. ಸೇವೆ ಯಾವ ರೂಪದ್ದೇ ಆಗಿರಲಿ, ಅದು ಜನರಲ್ಲಿ ಅರಿವನ್ನು ಮೂಡಿಸಬೇಕು. ಅವರ ಹೃದಯಕ್ಕೆ ವಜ್ರಸಾಣೆಯನ್ನು ಕೊಟ್ಟು ಮನುಷ್ಯರನ್ನಾಗಿ ಮಾಡಬೇಕು. ಆಗ ಸೇವೆ ಸಾರ್ಥಕ ಫಲವನ್ನು ಕೊಡುತ್ತದೆ.

## ನೈಜ ಸೇವೆ

ಪ್ರಾಮಾಣಿಕವಾದ, ಶ್ರಮಕ್ಕೆ ಮಹತ್ವ ಕೊಡುವ ದುಡಿಮೆಯ ಮನೋಧರ್ಮವನ್ನು ಬೆಳೆಸುವುದೇ **ಬಡತನವನ್ನು ನೀಗಿಸುವ ನೈಜ ಸೇವೆ**. ಮೊದಲು ಇದು ಆಗಬೇಕು. ದುರ್ಬಲರಾದ, ಬಡತನ-ಅಜ್ಞಾನಗಳಿಂದಾಗಿ ಹಿಂದುಳಿದ ಜನಸಾಮಾನ್ಯರನ್ನು ಉತ್ತಮ ಸ್ಥಿತಿಗೆ ತರುವ ಕಾರ್ಯ ಮಹತ್ವಪೂರ್ಣವಾದ ಜನಸೇವೆ.

**ಎರಡನೆಯದು ವಿದ್ಯಾದಾನ**. ಜನಸಾಮಾನ್ಯರಲ್ಲಿ ಸರಿಯಾದ ತಿಳಿವಳಿಕೆಯನ್ನು ಮೂಡಿಸುವುದು, ಅವರೊಳಗಿನ ಸತ್ವ ಸಾಮರ್ಥ್ಯಗಳನ್ನು ಪೂರ್ಣ ವಿಕಾಸಗೊಳಿಸುವಂತಹ ಶಿಕ್ಷಣ ಅಗತ್ಯ. ಅರ್ಥವಿಲ್ಲದ ಗೊಡ್ಡು ಸಂಪ್ರದಾಯಗಳನ್ನೂ, ಮೂಢನಂಬಿಕೆಗಳನ್ನೂ ಹೋಗಲಾಡಿಸಿ ನಮ್ಮ ಧರ್ಮ-ಸಂಸ್ಕೃತಿಗಳ ಅರ್ಥಪೂರ್ಣವಾದ ಅಂಶಗಳನ್ನು ಉಳಿಸಿಕೊಳ್ಳುವ ವಿವೇಚನೆ, ವೈಚಾರಿಕತೆಯನ್ನು ಬೆಳೆಸುವಂತಹ ಶಿಕ್ಷಣ ಕೊಡಬೇಕು. ಶೀಲ, ಪೌರುಷ, ಸ್ವಾವಲಂಬನೆ, ಆತ್ಮವಿಶ್ವಾಸಗಳನ್ನು ಬೆಳೆಸುವಂತಹ, ರಾಷ್ಟ್ರೀಯ ಭಾವೈಕ್ಯತೆಯನ್ನುಂಟುಮಾಡುವ ಶಿಕ್ಷಣ ಕೊಡುವುದೇ ವಿದ್ಯಾಸೇವೆ.

ಸರ್ವಧರ್ಮಸಮನ್ವಯದ ವಿಶಾಲ ಮನೋಭಾವವನ್ನು ಬೆಳೆಸುವ, ಸಂಕುಚಿತವಾದ ಮೇಲು-ಕೀಳು ಎಂಬ ಜಾತೀಯತೆ, ಅಸ್ಪೃಶ್ಯತೆಗಳನ್ನು ಸಂಪೂರ್ಣವಾಗಿ ನಿರ್ಮೂಲ ಮಾಡುವ **ನವಯುಗ ಧರ್ಮಪ್ರಚಾರ** ಮತ್ತೊಂದು ಅಗತ್ಯವಾದ ಸೇವೆ.

ಹೀಗೆಯೇ ದೇಶದ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಸ್ತ್ರೀಯರ ಸ್ಥಿತಿ-ಗತಿ, ಸ್ಥಾನ-ಮಾನಗಳನ್ನು ಉತ್ತಮಪಡಿಸುವುದು ಅತ್ಯಗತ್ಯವಾಗಿದೆ. ಅವರಿಗೆ ಸಲ್ಲಬೇಕಾದ ಸಮಾನತೆ, ಗೌರವಗಳನ್ನು ಕೊಟ್ಟು, ಅವರಲ್ಲಿನ ವಿಶಿಷ್ಟ ಶಕ್ತಿ-ಪ್ರತಿಭೆಗಳ ವಿಕಾಸಕ್ಕೆ ತಕ್ಕ ಶಿಕ್ಷಣವನ್ನು ಕೊಟ್ಟರೆ, ಅವರು ತಮ್ಮ ಸಮಸ್ಯೆಗಳನ್ನು ತಾವೇ ಪರಿಹರಿಸಿಕೊಳ್ಳಲು ಸಮರ್ಥರಾಗುತ್ತಾರೆ. ಅಬಲೆಯೆನಿಸಿಕೊಂಡು, ದಾಸಿಯಾಗಿ ಇಲ್ಲವೇ ಭೋಗವಸ್ತುವಾಗಿ, ನಾನಾ ದೌರ್ಜನ್ಯ, ಅತ್ಯಾಚಾರಗಳಿಗೆ ಗುರಿಯಾಗಿ, ಮೌಢ್ಯದ ಕತ್ತಲಲ್ಲಿ ಸೆರೆಯಾಗಿರುವ ಸಹಸ್ರಾರು ಮಹಿಳೆಯರು ಮುಕ್ತರಾಗಬೇಕು. **ಶಕ್ತಿಸ್ವರೂಪಿಣಿಯರಾಗಿ. ಮಾತೃಸ್ವರೂಪಿಣಿಯರಾಗಿ ಭಾರತದ ಆದರ್ಶವನ್ನು ಸಾಧಿಸಲು ಅವರಿಗೆ ಅವಕಾಶವನ್ನೂ, ಸೌಲಭ್ಯಗಳನ್ನೂ ಒದಗಿಸುವುದೇ ಒಂದು ಶ್ರೇಷ್ಠ ಸೇವೆ**.

**ಪರಿಸರ ಮಾಲಿನ್ಯವನ್ನು ತಡೆಯುವುದು,** ಪ್ರಾಕೃತಿಕ ಸಂಪತ್ತನ್ನು ಪೋಲು ಮಾಡದೆ, ಹಾಳು ಮಾಡದೆ ನಮ್ಮಿಂದಾದಷ್ಟು ಉಳಿಸಿ-ಬೆಳೆಸಿ ಮುಂದಿನ ಪೀಳಿಗೆಯವರಿಗೆ ಒದಗುವಂತೆ ಮಾಡುವುದು ಕೂಡ ಅತಿ ಮುಖ್ಯವಾದ ಸೇವೆ.

ಹೀಗೆ, ಇನ್ನೂ ಹಲವು ಬಗೆಯ ಸೇವೆಗಳ ಯೋಜನೆಯನ್ನು ಎಚ್ಚೆತ್ತ ಜನ ಹಾಕಿಕೊಳ್ಳಬೇಕು. ಲಾಭ-ಲೋಭ ದೃಷ್ಟಿಯಿಂದ ಸ್ವಾರ್ಥಕ್ಕಾಗಿ ಮಾಡುವ ಯಾವ ಕಾರ್ಯವೂ ಸೇವೆ ಆಗುವುದಿಲ್ಲ. ಆಧ್ಯಾತ್ಮಿಕ ಭಾವವನ್ನು ಹಿನ್ನೆಲೆಯಾಗಿಟ್ಟುಕೊಂಡು, ಜನಹಿತಕ್ಕಾಗಿ ಮಾಡುವ ಕಿಂಚಿತ್ ಕಾರ್ಯ ಕೂಡ ಸೇವೆಯಾಗುತ್ತದೆ.

## ಶ್ರೀಮಾತೆಯವರ ಆದರ್ಶ

ಒಂದು ಸಲ ಭಕ್ತೆಯೊಬ್ಬಳು ಶ್ರೀಮಾತೆಯ ಬಳಿ ಬಂದು, "ನನಗೆ ಐದು ಜನ ಹೆಣ್ಣು ಮಕ್ಕಳಿದ್ದಾರೆ. ಅವರಿಗೆ ವಿವಾಹ ಮಾಡುವುದೇ ಕಠಿಣವಾಗಿ ನನಗೆ ಅದೇ ಚಿಂತೆಯಾಗಿದೆ" ಎಂದಳು. ಶ್ರೀಮಾತೆ, "ಮದುವೆ ಆಗಲೇಬೇಕು ಎಂದೇಕೆ ಯೋಚಿಸುವೆ. ಸ್ಕೂಲಿಗೆ ಕಳಿಸು. ವಿದ್ಯಾವಂತರಾಗಿ ದೇಶಸೇವೆ ಮಾಡುತ್ತಾರೆ. ಅದರಿಂದ ಆತ್ಮೋದ್ಧಾರವೂ ಆಗುವುದು" ಎಂದರು. "ಈ ಕಾಲದಲ್ಲಿ ಗಂಡ ಸಿಕ್ಕುವುದೇ ಕಷ್ಟವಾಗಿದೆ. ಹುಡುಗರು ಮದುವೆಗೆ ಒಪ್ಪುವುದಿಲ್ಲ" ಎಂದು ಇನ್ನೊಬ್ಬರು ಹೇಳಿದಾಗ, ಶ್ರೀಮಾತೆ "ಹೌದೇ, ಹಾಗಾದರೆ ಒಳ್ಳೆಯ ಬುದ್ಧಿ ಬಂದಿದೆ. ಸಂಸಾರದ ಚಿಂತೆಗೊಳಗಾಗದೆ, ಒಂದೇ ಮನಸ್ಸಿನಿಂದ ದೇಶದ ಸೇವೆ ಮಾಡಲು ಅನುಕೂಲ" ಎಂದರು.

ಇನ್ನೊಂದು ದಿನ ಗೃಹಿಣಿ ಭಕ್ತೆಯರಿಗೆ ಶ್ರೀಮಾತೆ ಹೀಗೆ ಹೇಳಿದರು "ವಿವಾಹಿತರು ಒಂದೆರಡು ಮಕ್ಕಳಾದ ಮೇಲೆ ಸಂಯಮಿಗಳಾಗಿ ಬಾಳಬೇಕು ಎಂದು ಠಾಕೂರರು ಹೇಳುತ್ತಿದ್ದರು. ಆಂಗ್ಲರು ತಮ್ಮ ಧನಸಂಪತ್ತಿಯನ್ನು ಮೀರಿ ಸಂತಾನ ಪಡೆಯುವುದಿಲ್ಲವಂತೆ. ನಮ್ಮಲ್ಲಿ ತಂದೆ ತಾಯಿಗಳಿಗೆ ಹೊಟ್ಟೆಗಿರಲಿ ಇಲ್ಲದಿರಲಿ ಮಕ್ಕಳಾಗುವುದೇನೂ ತಪ್ಪುವುದಿಲ್ಲ. ಪಾಪ ಆ ಮಕ್ಕಳೋ ಆಜನ್ಮದರಿದ್ರರಾಗಿ ನರಕಜೀವನ ಮಾಡುತ್ತಾರೆ. ಹುಡುಗಿಯನ್ನು ನೋಡಿದರೆ ಚೋಟುದ್ದ ಇರುತ್ತಾಳೆ, ಆಗಲೆ ಹಿಂದೆ ಮುಂದೆ ಸೊಂಟದ ಮೇಲೆ ಮಕ್ಕಳು! ಸಂಸಾರದಲ್ಲಿ ಸುಖವಿಲ್ಲದಂತಾಗಿ ಬದುಕಿನಲ್ಲಿ ಹತಾಶೆ, ಜುಗುಪ್ಸೆ ಉಂಟಾಗುತ್ತವೆ."

ಹಳೆಯ ಸಂಪ್ರದಾಯದ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದ್ದರೂ, ಶಾಲೆಯಲ್ಲಿ ಓದದೆ ಇದ್ದರೂ, ಶ್ರೀಮಾತೆಯಲ್ಲಿ ಎಂಥ ವಿವೇಕ, ಎಂಥ ಸುಧಾರಕ ಮನೋಭಾವ ಇತ್ತು ಎಂಬುದಕ್ಕೆ ಇದು ನಿದರ್ಶನ. ಜನರ ಹಿತಕ್ಕೆ, ಉದ್ಧಾರಕ್ಕೆ ಸಹಾಯಕವಾಗುವ ಒಳ್ಳೆಯ ಅಂಶ ಎಲ್ಲೇ ಇರಲಿ, ಯಾರಲ್ಲೇ ಇರಲಿ – ಶ್ರೀಮಾತೆಯವರ ತೆರೆದ ಮನಸ್ಸು ಅದನ್ನು ಸ್ವೀಕರಿಸುತ್ತಿತ್ತು.

ಈ ಉದಾರವೂ ವಿಶಾಲವೂ ಆದ ಮನೋಧರ್ಮವನ್ನು ನಾವು ನಮ್ಮ ಸಾಮಾನ್ಯ ಜನರಲ್ಲೆಲ್ಲ ಬೆಳೆಸಲು ಪ್ರಯತ್ನಿಸಬೇಕು. ಅದುವೇ ಮಹತ್ತರವಾದ ಜನಸೇವೆ. ಅಂತಹ ಸೇವೆಯಿಂದ ಜನತೆಯ ಉದ್ಧಾರವಾಗುತ್ತದೆ, ಸೇವೆ ಮಾಡುವವರ ಆತ್ಮೋದ್ಧಾರವೂ ಆಗುತ್ತದೆ. ಭಗವಂತನೂ ಇದು ತನಗೇ ಸಲ್ಲಿಸಿದ ನಿರ್ಮಲ ಚಿತ್ತದ ಪೂಜೆಯೆಂದು ಪರಿಗ್ರಹಿಸಿ, ಅಂಥವರ ಮೇಲೆ ಸುಪ್ರೀತನಾಗುತ್ತಾನೆ.